■ ಹನಿ

# ಅಖ್ತರ್ ಷೋ!



ಬೇಗಂ ಅಖ್ತರ್, ಜಾವೇದ್ ಅಖ್ತರ್ ಮುಂತಾದವರ ಜತೆಗೆ ಶೋಯೆಬ್ ಅಖ್ತರ್ ಹೆಸರು ಹೇಳುವುದು ಕಷ್ಟ. ಪಾಕಿಸ್ತಾನ ಕ್ರಿಕೆಟ್‌ನ ಈ 'ಸುಂಟರಗಾಳಿ' ಒಂದೇ ಸಮನೆ ಸಮಸ್ಯೆಗಳನ್ನು ಸೃಷ್ಟಿಸಿದಾತ. ಗಂಟೆಗೆ 161.3 ಕಿ.ಮೀ ವೇಗದಲ್ಲಿ ಬೌಲಿಂಗ್ ಮಾಡಿ, ನಿಬ್ಬೆರಗಾಗಿಸಿದ ವಿಶ್ವದಾಖಲೆ ವೀರನೀತ. ಯಾವತ್ತೂ ಒಳ್ಳೆಯವನು ಅನ್ನಿಸಿಕೊಳ್ಳಲೇ ಇಲ್ಲ. 46 ಟೆಸ್ಟ್‌ಗಳಲ್ಲಿ, 163 ಒಂದು ದಿನ ಪಂದ್ಯಗಳಲ್ಲಿ ಆಡಿ, ಸರಾಸರಿ 25 ರನ್‌ಗಳಿಗೆ ಒಂದರಂತೆ ವಿಕೆಟ್ ಕಿತ್ತಿದ್ದಾನೆ. ಟೆಸ್ಟ್‌ನಲ್ಲಿ 2 ಸಲ, ಹತ್ತು ವಿಕೆಟ್ ಕಿತ್ತದ್ದು; 12 ಸಲ ಐದು ವಿಕೆಟ್ ಕಿತ್ತದ್ದೂ ಕಡಿಮೆ ಸಾಧನೆಯಲ್ಲ. ಆದರೆ ಪದೇ ಪದೇ ಗಾಯಗೊಳ್ಳುವುದು, ನಿಷೇಧಕ್ಕೆ ಒಳಗಾಗುವುದರಲ್ಲೇ ಈತ ಸುದ್ದಿ ಮಾಡಿದ. ಅಂತರ ರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಬಳಿಕ ಇದೀಗ ಈತನ ಹೊಸ ಪುಸ್ತಕ ವಿವಾದ ಹುಟ್ಟುಹಾಕಿದೆ. ಮುಂಬೈ ಮತ್ತು ಬೆಂಗಳೂರಿನಲ್ಲಿ ಆ ಪುಸ್ತಕದ ಬಿಡುಗಡೆ ಸಮಾರಂಭವೂ ರದ್ದಾಗಿದೆ.

'ಕಾಂಟ್ರಾವರ್ಸಿಯಲಿ ಯುವರ್ಸ್!' ಎಂಬ ಪುಸ್ತಕದ ಹಲವೆಡೆ ಬೀಸು ಹೇಳಿಕೆಗಳಿವೆ. 'ಸಚಿನ್ ಮತ್ತು ದ್ರಾವಿಡ್ ತಂಡ ಗೆಲ್ಲಿಸಲು ಆಡಿದ್ದೇ ಇಲ್ಲ– ಅವರದ್ದು ವ್ಯಕ್ತಿಗತ ಆಟ' ಎನ್ನುವ ಈತನ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ. '2006ರ ಪ್ರವಾಸದಲ್ಲಿ ಸಚಿನ್ ನನ್ನ ಬೌಲಿಂಗ್ ಎದುರಿಸಲು ಹೆದರಿದ್ದ' ಎನ್ನುವ ಹೇಳಿಕೆಗೆ ಪ್ರತಿಭಟನೆಯ ಬಳಿಕ ಶೋಯೆಬ್ ವಿಷಾದ ವ್ಯಕ್ತಪಡಿಸಿದ್ದಾನೆ. 'ನಾನು ನೈಟ್‌ಕ್ಲಬ್‌ಗೆಲ್ಲ ಹೋಗುತ್ತಿದ್ದುದು ನಿಜ. ಮಾಧ್ಯಮಗಳು ನನ್ನ ಫೋಟೋಗಳನ್ನಷ್ಟೇ ಹಾಕುತ್ತವೆ. ಪಾಕಿಸ್ತಾನದ ಕೆಲವು ಹಿರಿಯ ಆಟಗಾರರು ನೈಟ್‌ಕ್ಲಬ್‌ನಿಂದಲೇ ಮೈದಾನಕ್ಕೆ ಆಡಲು ಬಂದದ್ದಿದೆ. ಅವರ ಬಗ್ಗೆ ಏನೂ ಪ್ರಕಟವಾಗುವುದಿಲ್ಲ. ಮಹೇಶ್‌ಭಟ್ ಗ್ಯಾಂಗ್‌ಸ್ಟರ್ ಸಿನಿಮಾದಲ್ಲಿ ಪಾತ್ರ ಮಾಡು ಎಂದರು. ಆಸೆಯಿತ್ತು. ಪಾಕ್ ಕ್ರಿಕೆಟ್ ಮಂಡಳಿಯ ನಿಷೇಧದ ಭಯಕ್ಕೆ ಬೇಡವೆಂದೆ' ಎಂದೆಲ್ಲ ಶೋಯೆಬ್ ಬರೆದಿದ್ದಾನೆ. ಪುಸ್ತಕದ ಮುಖಪುಟದಲ್ಲಿ ಶೋಯೆಬ್ ಚೆಂಡನ್ನು ತನ್ನ ಒಂದು ಕಣ್ಣಿಗೆ ಅಡ್ಡಲಾಗಿ ಇಟ್ಟುಕೊಂಡ ಫೋಟೋ ಇದೆ. ಶೋಯೆಬ್ ಎಲ್ಲವನ್ನೂ ಒಕ್ಕಣ್ಣಿಂದ ಮಾತ್ರ ನೋಡಿರಬಹುದೆ? ಅದಕ್ಕೇ ಎಲ್ಲವೂ ಆತನಿಗೆ ಅರ್ಥಂಬರ್ಥ ಕಂಡಿರಬಹುದೆ?




Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65